ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 22-30
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಜಮ್ಮು-ಕಾಶ್ಮೀರದ 370ನೇ ವಿಧಿಯಡಿ ವಿಶೇಷ ಸ್ಥಾನಮಾನ ಅಳವಡಿಕೆ, ರದ್ದು ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪು: ಒಂದು ಅವಲೋಕನ

**ನೌಶಾದ್ ಹೆಚ್**
ಸಹಾಯಕ ಪ್ರಾಧ್ಯಾಪಕರು, ಡಿಎಸ್‌ಬಿಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಿಗೆರೆ.

***Abstract:***
*ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿ ಆ ರಾಜ್ಯವನ್ನು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಕ್ ಎಂಬ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ರಾಷ್ಟ್ರಪತಿಯವರು ಸಂವಿಧಾನಿಕ ಆದೇಶಗಳನ್ನು ಹೊರಡಿಸಿರುತ್ತಾರೆ. ಈ ಬಗ್ಗೆ ಸಲ್ಲಿಸಲಾಗಿದ್ದ ಅರ್ಜಿಗಳನ್ನು ವಿಚಾರಣೆ ಕೈಗೊಂಡ ಸುಪ್ರೀಂಕೋರ್ಟ್‌ನ ಐವರನ್ನೊಳಗೊಂಡ ಸಂವಿಧಾನಿಕ ಪೀಠವು, ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ್ದ ಕೇಂದ್ರ ಸರ್ಕಾರದ ನಿರ್ಧಾರವನ್ನು ಎತ್ತಿ ಹಿಡಿದಿದೆ. ಈ ಲೇಖನವು ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ಅದರ ಹಿನ್ನೆಲೆ, ಕೇಂದ್ರ ಸರ್ಕಾರದ ಹೊಸ ಆದೇಶ ಮತ್ತು ಸುಪ್ರೀಂಕೋರ್ಟಿನ (ಸರ್ವೋಚ್ಚ ನ್ಯಾಯಾಲಯ) ತೀರ್ಪುಗಳನ್ನು ವಿವರವಾಗಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.*

**Keywords:** *370ನೇ ವಿಧಿ, ಜಮ್ಮು-ಕಾಶ್ಮೀರ, ವಿಶೇಷ ಸ್ಥಾನಮಾನ, ಸುಪ್ರೀಂ ಕೋರ್ಟ್ ತೀರ್ಪು.*

**ಪೀಠಿಕೆ**

ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370 ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಕೇಂದ್ರ ಸರ್ಕಾರದ ನಿರ್ಧಾರವನ್ನು ಸರ್ವೋಚ್ಛ ನ್ಯಾಯಾಲಯ ಎತ್ತಿ ಹಿಡಿಯಿತು. ರಾಷ್ಟ್ರಪತಿಗಳು ಕೈಗೊಂಡ ನಿರ್ಧಾರದ ಮೇಲೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಜಮ್ಮು ಮತ್ತು ಕಾಶ್ಮೀರದಲ್ಲಿ 370 ನೇ ವಿಧಿಯ ರದ್ದು ಮಾಡುವ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.

**ಜಮ್ಮು- ಕಾಶ್ಮೀರದ ವಿಶೇಷ ಸ್ಥಾನಮಾನದ ಹಿನ್ನೆಲೆ ಮತ್ತು 370ನೇ ವಿಧಿಯ ಅಳವಡಿಕೆ :** ಬ್ರಿಟಿಷರು ಭಾರತವನ್ನು ತೊರೆಯುವಾಗ ಭಾರತವು ಎರಡು ವರ್ಗಗಳ ರಾಜಕೀಯ ಘಟಕಗಳನ್ನು ಒಳಗೊಂಡಿತ್ತು. ಅವುಗಳೆಂದರೆ ಬ್ರಿಟಿಷ್ ಪ್ರಾಂತ್ಯಗಳು (ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಯಲ್ಲಿ) ಮತ್ತು ರಾಜಪ್ರಭುತ್ವ ಸಂಸ್ಥಾನಗಳು (ಸ್ಥಳೀಯ ರಾಜಕುಮಾರರ ಆಳ್ವಿಕೆಯಲ್ಲಿ ಆದರೆ ಬ್ರಿಟಿಷ್ ರಾಣಿಯ ಪರಮಾಧಿಕಾರಕ್ಕೆ ಒಳಪಟ್ಟು). ಭಾರತದ ಸ್ವಾತಂತ್ರ್ಯ ಕಾಯ್ದೆ-1947 ರಲ್ಲಿ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವಾತಂತ್ರ್ಯ ರಾಷ್ಟ್ರಗಳನ್ನು ಸ್ಥಾಪಿಸಿದವು. ಜೊತೆಗೆ ಇಲ್ಲಿದ್ದ 552 ಸಂಸ್ಥಾನಗಳಿಗೂ ಸ್ವಾತಂತ್ರ್ಯವನ್ನು ನೀಡಿದ್ದರು. ಈ ಎಲ್ಲಾ ಸಂಸ್ಥಾನಗಳಿಗೂ ತಾವು ಇಚ್ಛಿಸಿದ ರಾಷ್ಟ್ರ ಸೇರುವ (ಭಾರತ ಅಥವಾ ಪಾಕಿಸ್ತಾನ) ಅಥವಾ ಸ್ವಾತಂತ್ರ್ಯವಾಗಿ ಉಳಿಯುವ ಆಯ್ಕೆಯನ್ನು

***Please cite this article as:*** ನೌಶಾದ್ ಹೆಚ್. (2024). ಜಮ್ಮು-ಕಾಶ್ಮೀರದ 370ನೇ ವಿಧಿಯಡಿ ವಿಶೇಷ ಸ್ಥಾನಮಾನ ಅಳವಡಿಕೆ, ರದ್ದು ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪು: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 2(6), 22–30.

ನೀಡಲಾಗಿತ್ತು. ಆಗ ಜಮ್ಮು ಮತ್ತು ಕಾಶ್ಮೀರದ ಮಹರಾಜ ಹರಿಸಿಂಗ್ ಸ್ವಾತಂತ್ರ್ಯವಾಗಿ ಉಳಿಯುವುದನ್ನು ಆಯ್ಕೆ ಮಾಡಿಕೊಂಡಿದ್ದರು. ಹೀಗಾಗಿ 1947ರ ಆಗಸ್ಟ್‌ನಲ್ಲೆ ಕಾಶ್ಮೀರವು ಭಾರತದೊಂದಿಗೆ ವಿಲೀನ ವಾಗಿರಲಿಲ್ಲ. ಆದರೆ ಸ್ವಾತಂತ್ರ್ಯವಾಗಿ ಉಳಿಯುವ ಅವರ ಆಯ್ಕೆ ದುಬಾರಿಯಾಗಿ ಪರಿಣಮಿಸಿತು. 1947ರ ಅಕ್ಟೋಬರ್ ನಲ್ಲಿ ಕಾಶ್ಮೀರವನ್ನು ಪಾಕಿಸ್ತಾನದ ಸೇನೆ ಅಕ್ರಮಿಸಿತು ಈ ದಾಳಿಯನ್ನು ಎದುರಿಸಲಾಗದೆ ಮಹರಾಜ ಹರಿಸಿಂಗ್ ಭಾರತದ ನೆರವನ್ನು ಕೇಳಿತು ಆಗ ಜಮ್ಮು ಕಾಶ್ಮೀರವನ್ನು ಭಾರತದೊಂದಿಗೆ ವಿಲೀನ ಮಾಡಿದರೆ ಮಾತ್ರ ಪಾಕಿಸ್ತಾನವನ್ನು ಎದುರಿಸಲು ನೆರವು ನೀಡುವುದಾಗಿ ಭಾರತ ಷರತ್ತು ಹಾಕಿತ್ತು. ಈ ಷರತ್ತಿಗೆ (Instrument of Accession) ಮಹಾರಾಜ ಹರಿಸಿಂಗ್ ಒಪ್ಪಿಗೆ ಕೊಟ್ಟಿದ್ದರು. ಹೀಗೆ ಷರತ್ತುಗಳ ಮೂಲಕವೇ ಜಮ್ಮು ಕಾಶ್ಮೀರವನ್ನು ಭಾರತದೊಂದಿಗೆ ವಿಲೀನ ಮಾಡಲಾಗಿತ್ತು. ನಂತರ ಭಾರತ ಸೇನೆ ಪಾಕಿಸ್ತಾನದ ಸೇನೆಯನ್ನು ಹಿಮ್ಮೆಟ್ಟಿಸಲು ಕಾರ್ಯಾಚರಣೆಯನ್ನು ಆರಂಭಿಸಿತು ಕಾರ್ಯಾಚರಣೆ ಆರಂಭವಾದ ಕೆಲವೇ ದಿನಗಳಲ್ಲಿ ವಿಶ್ವಸಂಸ್ಥೆಯು ಕದನ ವಿರಾಮ ಘೋಷಿಸಿತು. ಕಾಶ್ಮೀರವನ್ನು ವಿವಾದಿತ ಪ್ರದೇಶ ಎಂದು ಹೆಸರಿಸಿ ಆಯಾ ದೇಶದ ಸೇನೆಗಳ ಹದ್ದುಬಸ್ತಿನಲ್ಲಿರುವ ಪ್ರದೇಶ ಆಯಾ ದೇಶಗಳ ಬಳಿಯೇ ಇರಲಿ ಎಂದು ವಿಶ್ವಸಂಸ್ಥೆ ಹೇಳಿತು ಹೀಗಾಗಿ ಅಕ್ರಮಿತ ಕಾಶ್ಮೀರವು ಪಾಕಿಸ್ತಾನದ ಒಳಗೆ ಉಳಿಯಿತು ಈಗಲೂ ಆ ವಿವಾದ ಹಾಗೆಯೇ ಉಳಿದಿದೆ. ಜಮ್ಮು ಕಾಶ್ಮೀರವನ್ನು ಭಾರತದೊಂದಿಗೆ ವಿಲೀನ ಮಾಡಲಾಗಿ ಸಂವಿಧಾನವನ್ನು ರಚಿಸುವಾಗ ಆ ಷರತ್ತುಗಳನ್ನು 370ನೇ ವಿಧಿ (ಕರಡು ಸಂವಿಧಾನದಲ್ಲಿ 306ಎ) ಅಡಿ ಸಂವಿಧಾನಕ್ಕೆ ಸೇರಿಸಲಾಯಿತು.

**ಜಮ್ಮು-ಕಾಶ್ಮೀರ ಮತ್ತು ಭಾರತ ಸರ್ಕಾರದೊಂದಿಗಿನ ಒಪ್ಪಂದ (Instrument of accession)**

ಭಾರತದೊಂದಿಗೆ ವಿಲೀನವಾಗುವಾಗ ಕೆಲವೊಂದು ಷರತ್ತುಗಳಿಗೆ 1947ರ ಅಕ್ಟೋಬರ್ 26 ರಂದು ಭಾರತದ ಪ್ರಧಾನ ಮಂತ್ರಿಯಾಗಿದ್ದ ಪಂಡಿತ್ ಜವಾಹರ್‌ಲಾಲ್ ನೆಹರು ಮತ್ತು ಜಮ್ಮು ಕಾಶ್ಮೀರದ ಮಹಾರಾಜ ಹರಿಸಿಂಗ್ ಸಹಿ ಹಾಕಿದರು.

ಭಾರತದೊಂದಿಗೆ ವಿಲೀನವಾದರೂ ಜಮ್ಮು ಕಾಶ್ಮೀರದ ವಿದೇಶಾಂಗ ವ್ಯವಹಾರ, ರಕ್ಷಣೆ, ಮತ್ತು ಸಂವಹನ ವಿಚಾರಗಳಲ್ಲಿ ಮಾತ್ರ ಕೇಂದ್ರ ಸರ್ಕಾರಕ್ಕೆ ಅಧಿಕಾರವಿತ್ತು. ಉಳಿದ ಎಲ್ಲಾ ವಿಚಾರಗಳಲ್ಲಿ ಮಹಾರಾಜ ಹರಿಸಿಂಗ್ ಸ್ವಾತಂತ್ರ್ಯ ಅಧಿಕಾರ ಹೊಂದಿದ್ದರು. ಭಾರತದ ಸಂವಿಧಾನ ಅಂಗೀಕಾರವಾದರೂ ಈ ಷರತ್ತುಗಳ ಕಾರಣದಿಂದಾಗಿ ಜಮ್ಮು ಕಾಶ್ಮೀರಕ್ಕೆ ಪ್ರತ್ಯೇಕ ಸಂವಿಧಾನವನ್ನು ರಚಿಸಲಾಗಿತ್ತು ಭಾರತದ ಸಂವಿಧಾನವನ್ನೇ ಹೋಲುವ ಅದರ ನಕಲಿನಂತಿದ್ದ ಕಾಯ್ದೆಗಳನ್ನು ಒಳಗೊಂಡಿದ್ದ ಚಿಕ್ಕ ಸಂವಿಧಾನವನ್ನು ಜಮ್ಮು ಕಾಶ್ಮೀರಕ್ಕೆ ರಚಿಸಲಾಗುತ್ತದೆ.

**ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನದ ಕುರಿತು ಭಾರತದ ಸಂವಿಧಾನ ರಚನಾ ಸಭೆಯಲ್ಲಿ ನಡೆದ ಚರ್ಚೆ**

1949ರ ಅಕ್ಟೋಬರ್ 17ರಂದು ಸಂವಿಧಾನ ಕರಡು ರಚನಾ ಸಭೆಯಲ್ಲಿ 306ಎ ಕುರಿತು ಚರ್ಚೆ ನಡೆದಿತ್ತು (ನಂತರ ಅದು 370ನೇ ವಿಧಿಯಾಯಿತು). ಎನ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಸಭೆಯಲ್ಲಿ ಈ ವಿಧಿಯನ್ನು ಮಂಡಿಸಿದರು. ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿ ಆ ರಾಜ್ಯವು ಭಾರತದ ಡೋಮಿನಿಯನ್ ಗೆ ಸಮ್ಮತಿಸಿ ಸೇರಿದೆ. ಈ ಸೇರ್ಪಡೆ 1947ರ ಅಕ್ಟೋಬರ್ 26 ರಂದು ನಡೆಯಿತು. ರಾಷ್ಟ್ರಪತಿಯು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತ ವಿನಾಯಿತಿಗಳಿಗೆ ಮತ್ತು ಮಾರ್ಪಾಡುಗಳಿಗೆ ಒಳಪಟ್ಟು ಈ ಸಂವಿಧಾನದ ಅಂಥ ಇತರ ಉಪಬಂದಗಳು ರಾಜ್ಯಕ್ಕೆ ಸಂಭಂದಿಸಿದಂತೆ ಅನ್ವಯಿಸತಕ್ಕದ್ದು. ಪರಂತು ಆ ರಾಜ್ಯದ ಸೇರ್ಪಡೆ ದಾಸ್ತಾವೇಜಿನಲ್ಲಿ ಯಾವ ವಿಷಯಗಳನ್ನು ನಿರ್ದಿಷ್ಟಪಡಿಸಲಾಗಿದೆಯೋ ಆ ವಿಷಯಗಳಿಗೆ ಸಂಬಂಧಪಟ್ಟಂತೆ ಯಾವುದೇ ಆದೇಶವನ್ನು ಆ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸದ ಹೊರತು ಹೊರಡಿಸತಕ್ಕದ್ದಲ್ಲ ಎಂದರು.

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವುದರ ಬಗ್ಗೆ ಮೌಲಾನ ಹಸ್ರತ್ ಮೋಹಾನಿ ಆಕ್ಷೇಪ ವ್ಯಕ್ತಪಡಿಸಿದರು. ಯಾಕಾಗಿ ಇಂತಹ ತಾರತಮ್ಯವನ್ನು ಮಾಡಲಾಗುತ್ತಿದೆ? ಎಂದು ಪ್ರಶ್ನಿಸಿದ್ದರು. ಈ ಪ್ರಶ್ನೆಗೆ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ವಿಸ್ತೃತವಾಗಿಯೇ ಉತ್ತರ ನೀಡಿದ್ದರು ಆ ಉತ್ತರದ ಸಂಕ್ಷಿಪ್ತ ರೂಪವನ್ನು ಇಲ್ಲಿ ನೀಡಲಾಗಿದೆ.

ಕಾಶ್ಮೀರದ ಸ್ಥಿತಿಗೂ ಭಾರತದ ಇತರ ರಾಜ್ಯಗಳ ಸ್ಥಿತಿಗೂ ಬಹಳ ಅಂತರವಿದೆ ಭಾರತದೊಂದಿಗೆ ಸೇರಿಕೊಳ್ಳುವುದಕ್ಕೆ ಕಾಶ್ಮೀರ ಇನ್ನೂ ಸಿದ್ಧವಾಗಿಲ್ಲ ಆದ್ದರಿಂದ ಕಾಶ್ಮೀರದ ವಿಚಾರಗಳಿಗೆ ಸಂಬಂಧಿಸಿದಂತೆ ಯಾಕಾಗಿ ಮುತುವರ್ಜಿ ವಹಿಸಬೇಕು ಎನ್ನುವುದಕ್ಕೆ ಹಲವು ಕಾರಣಗಳಿವೆ ಜಮ್ಮು ಮತ್ತು ಕಾಶ್ಮೀರದಲ್ಲಿ ಆಂತರಿಕ ಯುದ್ಧ ನಡೆಯುತ್ತಿದೆ ಇದೇ ವರ್ಷದ ಪ್ರಾರಂಭದಲ್ಲಿ ಕದನ ವಿರಾಮ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ ಅದು ಜಾರಿಯಲ್ಲಿಯೂ ಇದೆ ಆದರೂ ರಾಜ್ಯದಲ್ಲಿ ಸಾಮಾನ್ಯ ಸ್ಥಿತಿ ನಿರ್ಮಾಣವಾಗಿಲ್ಲ ರಾಜ್ಯದ ಕೆಲವು ಭಾಗಗಳು ಇದುವರೆಗೂ ಕೆಲವು ಬಂಡುಕೋರ ಶತ್ರುಗಳ ಕೈಯಲ್ಲಿದೆ ರಾಜ್ಯದ ಸಮಸ್ಯೆಗಳ ಪರಿಹಾರಕ್ಕಾಗಿ ವಿಶ್ವಸಂಸ್ಥೆಯ ಮೆಟ್ಟಿಲೇರಿಯಾಗಿದೆ. ಆದರೆ ಅದು ಇನ್ನೂ ಇತ್ಯರ್ಥವಾಗಿಲ್ಲ ಈಗ ಭಾರತ ಸರ್ಕಾರವು ಕಾಶ್ಮೀರದ ಜನರೊಂದಿಗೆ ಕೆಲವು ಒಪ್ಪಂದಗಳನ್ನು ಮಾಡಿಕೊಂಡಿದೆ ಭಾರತದೊಂದೀಗೆ ಸೇರಬೇಕೆ ಬೇಡವೇ ಎಂದು ನಿರ್ಧರಿಸುವ ಹಕ್ಕನ್ನು ಕಾಶ್ಮೀರದ ಜನರಿಗೆ ನೀಡಲಾಗಿದೆ ಜನಮತ ಗಣನೆಯಲ್ಲಿ ಜನರು ಕೈಗೊಳ್ಳುವ ನಿರ್ಧಾರಕ್ಕೆ ನಾವು ಬದ್ಧರಾಗಬೇಕು. ಜನರ ಇಚ್ಛೆಯ ಅನುಸಾರವೇ ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ರಚನೆಯಾಗಲಿದೆ. ಜೊತೆಗೆ ಈ ರಾಜ್ಯದ ಮೇಲೆ ಕೇಂದ್ರ ಸರಕಾರಕ್ಕೆ ಎಷ್ಟರಮಟ್ಟಿಗೆ ಅಧಿಕಾರವಿದೆ ಎನ್ನುವುದು ಕೂಡ ಇಲ್ಲಿನ ಜನರ ಇಚ್ಛೆಯಂತೆಯೇ ನಡೆಯುತ್ತದೆ ಎಂಬ ಒಪ್ಪಂದವನ್ನು ನಾವು ಕಾಶ್ಮೀರದ ಜನರೊಂದಿಗೆ ಮಾಡಿಕೊಂಡಿದ್ದೇವೆ ಮತ್ತು ನಾವು ಒಪ್ಪಂದಕ್ಕೆ ಬದ್ಧರಾಗಿರಬೇಕು ಎಂದು ಎನ್ ಗೋಪಾಲಸ್ವಾಮಿ ಅಯ್ಯಂಗಾರ್ ಉತ್ತರಿಸಿದರು.

**ಜಮ್ಮು–ಕಾಶ್ಮೀರದ ಪ್ರತ್ಯೇಕ ಸಂವಿಧಾನ ರಚನಾ ಸಭೆ**

ಭಾರತ ಸಂವಿಧಾನವನ್ನು ಅಂಗೀಕರಿಸಿಕೊಂಡ ನಂತರ ಪ್ರತ್ಯೇಕ ಸಂವಿಧಾನವನ್ನು ರಚಿಸಿಕೊಳ್ಳುವ ಅಧಿಕಾರವು ಜಮ್ಮು ಮತ್ತು ಕಾಶ್ಮೀರಕ್ಕೆ ದತ್ತವಾಯಿತು. ಈ ಪ್ರಕಾರ ಚುನಾವಣೆ ನಡೆದು ಆಯ್ಕೆಯಾದ 75 ಸದಸ್ಯರ ಜಮ್ಮು–ಕಾಶ್ಮೀರ ಸಂವಿಧಾನ ರಚನಾ ಸಭೆಯು 1951ರ ಸೆಪ್ಟೆಂಬರ್ ನಲ್ಲಿ ರಚನೆಯಾಯಿತು. ಐದು ವರ್ಷಗಳ ಅವಧಿಯಲ್ಲಿ 56 ಕಲಾಪಗಳನ್ನು ಸಂವಿಧಾನ ರಚನಾ ಸಭೆ ನಡೆಸಿದ್ದು ನಂತರ 1956 ರ ನವಂಬರ್ 17ರಂದು ಜಮ್ಮು ಮತ್ತು ಕಾಶ್ಮೀರದ ಸಂವಿಧಾನವನ್ನು ಅಂಗೀಕರಿಸಲಾಗಿತ್ತು. ಜಮ್ಮು ಮತ್ತು ಕಾಶ್ಮೀರ ರಾಜ್ಯವು ಭಾರತ ಒಕ್ಕೂಟದ ಅವಿಭಾಜ್ಯ ಅಂಗ ಎಂದು ಆ ಸಂವಿಧಾನದಲ್ಲಿ ಘೋಷಿಸಲಾಗಿತ್ತು ಸಂವಿಧಾನ ರಚನಾ ಕಾರ್ಯ ಮುಗಿದ ಕಾರಣ ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ರಚನಾ ಸಭೆಯನ್ನು 1957ರಲ್ಲಿ ಬರಖಾಸ್ತು (ವಿಸರ್ಜನೆ) ಮಾಡಲಾಯಿತು.

**ಸಂವಿಧಾನದ ವಿಧಿ 370**

ಭಾರತದ ಸಂವಿಧಾನದ ಅನುಚ್ಛೇದ 1 ರ ಅಡಿಯಲ್ಲಿ, ಜಮ್ಮು ಮತ್ತು ಕಾಶ್ಮೀರ ಭಾರತದ ಒಕ್ಕೂಟದ ಒಂದು ಘಟಕ ರಾಜ್ಯವಾಗಿದೆ ಮತ್ತು ಅದರ ಪ್ರದೇಶವು ಭಾರತದ ಭೂಪ್ರದೇಶದ ಒಂದು ಭಾಗವಾಗಿದೆ ಎಂದಿದೆ. ಮತ್ತೊಂದೆಡೆ, ಸಂವಿಧಾನದ ಭಾಗ 21 ರಲ್ಲಿ 370ನೇ ವಿಧಿಯು ಜಮ್ಮು ಕಾಶ್ಮೀರಕ್ಕೆ ವಿಶೇಷವಾದ ಸ್ಥಾನವನ್ನು ನೀಡುತ್ತದೆ ಉಳಿದ ಯಾವುದೇ ವಿಧಿಗಳು ಕೂಡ ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸುತ್ತಿರಲಿಲ್ಲ ಅದೇ ರೀತಿ ರಾಜ್ಯ ಪಟ್ಟಿ ಮತ್ತು ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳಲ್ಲಿ ಕಾನೂನು ಮಾಡುವ ಸಂಪೂರ್ಣ ಅಧಿಕಾರ ಜಮ್ಮು ಮತ್ತು ಕಾಶ್ಮೀರ ರಾಜ್ಯ ಸರ್ಕಾರಕ್ಕೆ

ಇತ್ತು. ಇನ್ನೂ ಕೇಂದ್ರ ಪಟ್ಟಿಯಲ್ಲಿನ ರಕ್ಷಣೆ, ವಿದೇಶಾಂಗ ವ್ಯವಹಾರ ಮತ್ತು ಸಂಪರ್ಕ ಕ್ಷೇತ್ರಗಳಲ್ಲಿ ಮಾತ್ರ ಕೇಂದ್ರ ಸರ್ಕಾರವು ಕಾನೂನು ಮಾಡುವ ಅಧಿಕಾರವಿತ್ತು. ಉಳಿದ ಯಾವುದೇ ವಿಷಯಗಳಲ್ಲಿ ಕೇಂದ್ರ ಸರ್ಕಾರವು ಕಾನೂನು ಮಾಡಬೇಕಾದರೆ ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಒಪ್ಪಿಗೆಯೊಂದಿಗೆ ರಾಷ್ಟ್ರಪತಿಯವರು ಆದೇಶವನ್ನು ಹೊರಡಿಸಬೇಕು.

ಸಂವಿಧಾನದ 370ನೇ ವಿಧಿಯು ಜಮ್ಮು ಕಾಶ್ಮೀರ ರಾಜ್ಯದ ಕುರಿತು ವಿವರಿಸುತ್ತದೆ ಕಾಶ್ಮೀರದಲ್ಲಿ ಪ್ರತ್ಯೇಕ ಸಂವಿಧಾನವು ಅಸ್ತಿತ್ವದಲ್ಲಿದೆ 1956ರ ನವಂಬರ್ 17ರಂದು ರಾಜ್ಯದ ವಿಧಾನಸಭೆಯು ಸರ್ವಾನುಮತದಿಂದ ಇದನ್ನು ಅಂಗೀಕರಿಸಿದೆ ಈ ಸಂವಿಧಾನದ ಒಂದರಿಂದ ಎಂಟು ಮತ್ತು 158ನೇ ವಿಧಿಗಳು ಅಂದೇ ಜಾರಿಗೆ ಬಂದಿದೆ ಉಳಿದೆಲ್ಲ ವಿಧಿಗಳು ಜಾರಿಗೆ ಬಂದದ್ದು 1957ರ ಜನವರಿ 26ರಂದು ಇದರಿಂದಾಗಿಯೇ ಜಮ್ಮು ಕಾಶ್ಮೀರದ ಸಂವಿಧಾನವು ದೇಶದಲ್ಲಿ ಜಾರಿಯಲ್ಲಿರುವ ಎರಡನೇ ಸಂವಿಧಾನ ಎಂದು ಹೇಳಲಾಗುತ್ತದೆ. ಕಾಶ್ಮೀರದ ಸಂವಿಧಾನವು ತಿದ್ದುಪಡಿಕೊಳ್ಳುವುದು ಅಲ್ಲಿನ ವಿಧಾನಸಭೆಯಲ್ಲಿ.

ಈ ರಾಜ್ಯದಲ್ಲಿ ಆಸ್ತಿ ಹೊಂದಿರುವವರು ಪ್ರತ್ಯೇಕ ಕಾನೂನು ಪಾಲಿಸಬೇಕು ಹಾಗೂ ಪ್ರತ್ಯೇಕ ನಾಗರಿಕತೆ ಹೊಂದಿರಬೇಕು ಎನ್ನುತ್ತದೆ ಈ ವಿಧಿ. ರಾಜ್ಯದ ಜನರ ಮೂಲಭೂತ ಹಕ್ಕುಗಳು ಕೂಡ ಇತರ ರಾಜ್ಯಗಳಿಗಿಂತ ಭಿನ್ನವಾಗಿದೆ

**ಸಂವಿಧಾನದ 370ನೇ ವಿಧಿ ಬದಲಾವಣೆ ಮಾಡಲು ಅವಕಾಶವಿದೆಯೇ?**

ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡಿದ ಸಂವಿಧಾನದ 370ನೇ ವಿಧಿಯಲ್ಲಿ ಬದಲಾವಣೆಯಾಗಬೇಕಾದರೆ ರಾಷ್ಟ್ರಪತಿಯವರ ಆದೇಶ ಹೊರಡಿಸಬೇಕಾಗುವುದು ಹಾಗೆಯೇ ರಾಷ್ಟ್ರಪತಿಯವರು ಆದೇಶ ಹೊರಡಿಸುವುದಕ್ಕಿಂತ ಮುಂಚಿತವಾಗಿ ಜಮ್ಮು ಕಾಶ್ಮೀರದ ಸಂವಿಧಾನ ರಚನಾ ಸಭೆಯಲ್ಲಿ ಚರ್ಚೆಯಾಗಿ ಅನುಮತಿ ಪಡೆಯಬೇಕಾಗುತ್ತದೆ ಎಂಬ ನಿಯಮವಿದೆ.

**1954ರ ರಾಷ್ಟ್ರಪತಿಯವರ ಆದೇಶ ಮತ್ತು 35ಎ ವಿಧಿಯ ಸೇರ್ಪಡೆ**

ಪ್ರಾರಂಭದಲ್ಲಿ ಒಕ್ಕೂಟ ಸರಕಾರಕ್ಕೆ ರಕ್ಷಣೆ, ವಿದೇಶಾಂಗ ಮತ್ತು ಸಂವಹನಕ್ಕೆ ಸಂಬಂಧಿಸಿದ ಸೀಮಿತ ಅಧಿಕಾರ ವ್ಯಾಪ್ತಿಯಿತ್ತು. 370 ನೇ ವಿಧಿಯ ನಿಬಂಧನೆಗಳ ಅನುಸಾರವಾಗಿ, ರಾಷ್ಟ್ರಪತಿಗಳು ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸುವಿಕೆ) ಆದೇಶ, 1950, ರಾಜ್ಯದ ಮೇಲೆ ಕೇಂದ್ರದ ಅಧಿಕಾರ ವ್ಯಾಪ್ತಿಯನ್ನು ನಿರ್ದಿಷ್ಟಪಡಿಸಲು ಆದೇಶವನ್ನು ಹೊರಡಿಸಿದರು. 1952 ರಲ್ಲಿ, ಭಾರತ ಸರ್ಕಾರ ಮತ್ತು ಜಮ್ಮು ಕಾಶ್ಮೀರ ರಾಜ್ಯವು ತಮ್ಮ ಭವಿಷ್ಯದ ಸಂಬಂಧದ ಕುರಿತು ದೆಹಲಿಯಲ್ಲಿ ಒಪ್ಪಂದವನ್ನು ಮಾಡಿಕೊಂಡವು. 1954 ರ ಸಂವಿಧಾನ ಸಭೆ, ದೆಹಲಿ ಒಪ್ಪಂದವನ್ನು ಅನುಮೋದಿಸಿತು. ನಂತರ, ರಾಷ್ಟ್ರಪತಿಗಳು ಅದೇ ಶೀರ್ಷಿಕೆಯೊಂದಿಗೆ ಮತ್ತೊಂದು ಆದೇಶವನ್ನು ನೀಡಿದರು, ಅಂದರೆ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸುವಿಕೆ) ಆದೇಶ, 1954. ಈ ಆದೇಶವು 1950 ರ ಹಿಂದಿನ ಆದೇಶವನ್ನು ರದ್ದುಗೊಳಿಸಿತು ಮತ್ತು ರಾಜ್ಯದ ಮೇಲೆ ಕೇಂದ್ರದ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಿತು. ತಿದ್ದುಪಡಿ ಮತ್ತು ಮಾರ್ಪಡಿಸಿದಂತೆ ಇದು ಮೂಲಭೂತ ಆದೇಶವಾಗಿದೆ

ಈ ರಾಷ್ಟ್ರಪತಿಯವರ ಆದೇಶದಲ್ಲಿ ಸುಪ್ರೀಂ ಕೋರ್ಟ್, ಚುನಾವಣಾ ಆಯೋಗ, ಸಂವಿಧಾನದ 356ನೇ ವಿಧಿ, ಕೆಲವು ಮಾರ್ಪಾಡುಗಳೊಂದೀಗೆ ಮೂಲಭೂತ ಹಕ್ಕುಗಳು, ರಾಷ್ಟ್ರಪತಿ ಆಡಳಿತ ಮುಂತಾದ ಕೇಂದ್ರ ಸರ್ಕಾರದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಇದರ ಜೊತೆಗೆ ಸಂವಿಧಾನದ 35ಎ ಎಂಬ ಹೊಸ ಕಲಂ ಭಾರತದ ಸಂವಿಧಾನಕ್ಕೆ ಸೇರಿಸಲಾಯಿತು. ಜಮ್ಮು ಮತ್ತು ಕಾಶ್ಮೀರದ ನಾಗರಿಕರಿಗೆ ಮಾತ್ರ ಆಸ್ತಿ, ಶಿಕ್ಷಣ, ಉದ್ಯೋಗದಲ್ಲಿ

ವಿಶೇಷ ಅಧಿಕಾರ ನೀಡುವುದಕ್ಕೆ ಸಂಬಂಧಿಸಿದ 35ಎ ಕಲಂ ಪ್ರಕಾರ ಆ ರಾಜ್ಯದ ಕಾಯಂ ನಿವಾಸಿಗಳನ್ನು ಅಂದರೆ ಸ್ಥಳೀಯರನ್ನು ಬಿಟ್ಟು ಹೊರಗಿನವರು ಯಾರು ಈ ರಾಜ್ಯದಲ್ಲಿ ಸ್ಥಿರ ಆಸ್ತಿ ಹೊಂದುವಂತಿಲ್ಲ ಅಲ್ಲದೆ ಶಿಕ್ಷಣ, ವಿದ್ಯಾರ್ಥಿ ವೇತನ, ಮತ್ತು ಉದ್ಯೋಗಕ್ಕೆ ಸ್ಥಳೀಯರಷ್ಟೇ ಅರ್ಹರು. ಅಲ್ಲಿನ ಮಹಿಳೆಯರು ರಾಜ್ಯದ ಹೊರಗಿನವರನ್ನು ಮದುವೆಯಾದರೆ ಈ ವಿಶೇಷ ಸೌಲಭ್ಯಗಳಿಂದ ವಂಚಿತರಾಗುತ್ತಾಳೆ. ಆದರೆ ಅಲ್ಲಿನ ಪುರುಷರು ಹೊರ ರಾಜ್ಯದ ಮಹಿಳೆಯನ್ನು ಮದುವೆಯಾದರೆ ಆತನ ಹಕ್ಕಿಗೆ ಧಕ್ಕೆ ಬರುವುದಿಲ್ಲ ಜೊತೆಗೆ ಆತನ ಪತ್ನಿಗೂ ಈ ಎಲ್ಲಾ ಹಕ್ಕುಗಳು ಪ್ರಾಪ್ತವಾಗುತ್ತವೆ. ಸಂವಿಧಾನಕ್ಕೆ ಈ ಕಲಂ ಸೇರ್ಪಡೆಯಾಗಿದ್ದು ಕೂಡ ಸಂಸತ್ತಿನ ನಿರ್ಣಯದ ಮೂಲಕ ಅಲ್ಲ ಬದಲಿಗೆ ಕಾಶ್ಮೀರಕ್ಕೆ ಸಂಬಂಧಿಸಿದಂತೆ ಇರುವ ವಿಶೇಷ ಅಧಿಕಾರ ಬಳಸಿ ರಾಷ್ಟ್ರಪತಿ ಹೊರಡಿಸಿದ ಆದೇಶದ ಮೂಲಕ.

**ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ ವಿಶೇಷ ಸ್ಥಾನಮಾನದ ರದ್ದತಿ (2019ರ ರಾಷ್ಟ್ರಪತಿ ಆದೇಶ)**

ಜಮ್ಮು ಕಾಶ್ಮೀರ ರಾಜ್ಯವು ಸ್ವಾತಂತ್ರ್ಯ ನಂತರದಿಂದ ಅನುಭವಿಸಿಕೊಂಡು ಬಂದಿದ್ದ ವಿಶೇಷ ಅಧಿಕಾರ ಮತ್ತು ಸೌಲಭ್ಯಗಳನ್ನು ರದ್ದು ಮಾಡಲಾಗಿದೆ. ಈ ವಿಧಿಯನ್ನು ನಿಷ್ಕ್ರಿಯಗೊಳಿಸಲು ಕೇಂದ್ರ ಸರಕಾರವು ಕೆಲವು ಸಾಂವಿಧಾನಿಕ ಆದೇಶಗಳ ಮೊರೆಹೋಗಿದೆ 370ನೇ ವಿಧಿಯಲ್ಲಿ ಇರುವ ಸಂವಿಧಾನ ರಚನಾ ಸಮಿತಿ ಎಂಬ ಪದಗಳನ್ನು ಶಾಸನಸಭೆ ಎಂದು ಓದಿಕೊಳ್ಳಬೇಕು ಎಂದು 2019 ರ ಆಗಸ್ಟ್ 5 ರಂದು ಸಂವಿಧಾನದ ಆದೇಶವನ್ನು ಹೊರಡಿಸಿದೆ. ಆದರೆ 2019ರ ಆಗಸ್ಟ್‌ನಲ್ಲಿ ಜಮ್ಮು–ಕಾಶ್ಮೀರದಲ್ಲಿ ವಿಧಾನಸಭೆ ಇರಲಿಲ್ಲ ವರ್ಷದ ಹಿಂದೆಯೇ ವಿಧಾನಸಭೆಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಳ್ವಿಕೆ ಹೇರಲಾಗಿತ್ತು ಹೀಗಾಗಿ ವಿಶೇಷ ಸ್ಥಾನವನ್ನು ತೆಗೆದುಹಾಕಿ ಎಂದು ಶಿಫಾರಸ್ಸು ಮಾಡಲು ವಿಧಾನ ಸಭೆಯು ಅಸ್ತಿತ್ವದಲ್ಲಿ ಇರಲಿಲ್ಲ ಈ ತೊಡಕನ್ನು ನಿವಾರಿಸಿಕೊಳ್ಳಲು ಕೇಂದ್ರ ಸರ್ಕಾರವು ಇನ್ನೊಂದು ಸಾಂವಿಧಾನಿಕ ಆದೇಶವನ್ನು ಹೊರಡಿಸಿತು. 2019ರ ಆಗಸ್ಟ್ ಐದರಂದು ಹೊರಡಿಸಿದ್ದ ಈ ಆದೇಶದಲ್ಲಿ 370ನೇ ವಿಧಿಯು ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಅಧಿಕಾರವನ್ನು ಸಂಸತ್ತಿನ ಶಿಫಾರಸ್ಸಿನ ಆಧಾರದ ಮೇಲೆ ರಾಷ್ಟ್ರಪತಿ ನಿಷ್ಕ್ರಿಯಗೊಳಿಸಿದ್ದಾರೆ ಎಂದು ಘೋಷಿಸಿತು. ಈ ಮೂಲಕ ವಿಶೇಷ ಸ್ಥಾನವನ್ನು ವಾಪಸ್ ಪಡೆಯಿತು ಮತ್ತು ಇನ್ನು ಜಮ್ಮು–ಕಾಶ್ಮೀರದ ಪ್ರತ್ಯೇಕ ಸಂವಿಧಾನ ಅನ್ವಯವಾಗುವುದಿಲ್ಲ ಎಂದು ಘೋಷಿಸಿತು ಆದರೆ 370ನೇ ವಿಧಿಯನ್ನು ಭಾರತದ ಸಂವಿಧಾನದಲ್ಲಿ ಉಳಿಸಿಕೊಳ್ಳಲಾಗಿದೆ.

**ಕೇಂದ್ರಾಡಳಿತ ಪ್ರದೇಶವಾಗಿ ಜಮ್ಮು–ಕಾಶ್ಮೀರ ಮತ್ತು ಲಡಾಕ್**

2019ರ ರಾಷ್ಟ್ರಪತಿಯ ಆದೇಶದ ಮೂಲಕ ಜಮ್ಮು ಕಾಶ್ಮೀರ ರಾಜ್ಯಕ್ಕೆ ನೀಡಿದ್ದ ವಿಶೇಷ ಅಧಿಕಾರ ಮತ್ತು ಸೌಲಭ್ಯಗಳನ್ನು ರದ್ದು ಮಾಡಿ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಕ್ ಎಂಬ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಲಾಗಿದೆ.

ಕೇಂದ್ರಡಳಿತ ಪ್ರದೇಶ ಅಂದರೆ ಸರಳವಾಗಿ ಹೇಳುವುದಾದರೆ ಇಲ್ಲಿನ ಆಡಳಿತಾತ್ಮಕ ವಿಭಾಗ ಕೇಂದ್ರದ ನಿಯಂತ್ರಣದಲ್ಲಿರುತ್ತವೆ ಮತ್ತು ಇಲ್ಲಿ ಕೇಂದ್ರ ಸರ್ಕಾರದ್ದೇ ಆಡಳಿತ. ಪುದುಚೆರಿ, ದೆಹಲಿ, ಚಂಡಿಗಡ, ದಾದ್ರಾ–ನಾಗರಹವೇಲಿ, ದಾಮನ್–ದಿಯು, ಲಕ್ಷದ್ವೀಪ ಮತ್ತು ಅಂಡಮಾನ್ ನಿಕೋಬಾರ್‌ಗಳು. ದೇಶದಲ್ಲಿರುವ ಕೇಂದ್ರಾಡಳಿತ ಪ್ರದೇಶಗಳ ಪೈಕಿ ದೆಹಲಿ ಮತ್ತು ಪುದುಚೇರಿಯಲ್ಲಿ ಮಾತ್ರ ಪ್ರತ್ಯೇಕ ವಿಧಾನಸಭೆಗಳಿವೆ. ಅಲ್ಲಿ ಸರ್ಕಾರಗಳು ಇವೆ, ಮುಖ್ಯಮಂತ್ರಿಗಳು ಇದ್ದಾರೆ. ಇನ್ನುಳಿದ ಪ್ರದೇಶಗಳಲ್ಲಿ ಕೇಂದ್ರವೇ ನೇರವಾಗಿ ಆಡಳಿತ ನಡೆಸುತ್ತದೆ ಸದ್ಯ ಜಮ್ಮು ಕಾಶ್ಮೀರಕ್ಕೆ ವಿಧಾನಸಭೆ ಪ್ರಾಪ್ತವಾಗುತ್ತಿದೆ ಆದರೆ ಲಡಾಕಿಗೆ ವಿಧಾನಸಭೆ ಇಲ್ಲ.

ವಿಧಾನಸಭೆಯುಳ್ಳ ಕೇಂದ್ರಾಡಳಿತ ಪ್ರದೇಶ ಎಂದರೆ ಈ ಪ್ರದೇಶವು ಬಹುಪಾಲು ರಾಜ್ಯದ

ಸ್ಥಾನಮಾನವನ್ನು ಹೊಂದಿರುತ್ತದೆ ಇಲ್ಲಿ ವಿಧಾನಸಭೆ ಮತ್ತು ಲೆಫ್ಟಿನೆಂಟ್ ಗವರ್ನರ್ ಇರುತ್ತಾರೆ ಚುನಾಯಿತ ಶಾಸಕರು, ಮುಖ್ಯಮಂತ್ರಿ, ಮಂತ್ರಿಮಂಡಲವು ಇರುತ್ತದೆ. ಲೆಫ್ಟಿನೆಂಟ್ ಗವರ್ನರ್ ಅವರು ರಾಷ್ಟ್ರಪತಿಗಳ ಪ್ರತಿನಿಧಿಗಳಾಗಿ ಇಲ್ಲಿ ಕಾರ್ಯನಿರ್ವಹಿಸುತ್ತಾರೆ. ಮಂತ್ರಿಮಂಡಲದ ಶಿಫಾರಸುಗಳು ಅಧಿಕಾರಿಗಳ ಸಲಹೆಗಳ ಆಧಾರದಲ್ಲಿ ಇವರು ಕಾರ್ಯ ನಿರ್ವಹಿಸುತ್ತಾರೆ ಆದರೆ ಪ್ರತಿ ವಿಷಯಗಳಲ್ಲೂ ಇವರು ಕ್ಯಾಬಿನೆಟ್‌ನ ಸಮ್ಮತಿ ಪಡೆಯಲೇಬೇಕು ಎಂಬ ಅನಿವಾರ್ಯತೆಗಳೇನು ಇಲ್ಲ ಇದಕ್ಕೆ ಸೂಕ್ತ ಉದಾಹರಣೆ ಎಂದರೆ ದೆಹಲಿ. ರಾಷ್ಟ್ರ ರಾಜಧಾನಿಯಲ್ಲಿರುವ ಸರ್ಕಾರಕ್ಕೆ ಭೂಮಿ, ಕಾನೂನು, ಪೊಲೀಸ್ ವಿಚಾರದಲ್ಲಿ ಅಧಿಕಾರ ಇಲ್ಲ ಈ ವಿಚಾರಗಳಲ್ಲಿ ಲೆಫ್ಟಿನೆಂಟ್ ಗವರ್ನರ್ ಅವರದೇ ಅಂತಿಮ ತೀರ್ಮಾನ. ದೆಹಲಿ ಪುದುಚೆರಿಗಳ ಜೊತೆಗೆ ಈಗ ಜಮ್ಮು-ಕಾಶ್ಮೀರವು ಈ ಪಟ್ಟಿ ಸೇರಿಕೊಳ್ಳಲಿದೆ.

ವಿಧಾನಸಭೆ ಇಲ್ಲದ ಕೇಂದ್ರಾಡಳಿತ ಪ್ರದೇಶವೆಂದರೆ, ಈ ಪ್ರದೇಶಗಳಿಗೆ ವಿಧಾನಸಭೆ ಮುಖ್ಯಮಂತ್ರಿಗಳು ಇರಲಾರರು. ಕೇಂದ್ರ ಸರ್ಕಾರವೇ ಇಲ್ಲಿ ನೇರವಾಗಿ ಆಡಳಿತ ನಡೆಸುತ್ತದೆ ಇಲ್ಲಿರುವ ಲೆಫ್ಟಿನೆಂಟ್ ಗವರ್ನರ್ ಅವರು ನಿತ್ಯದ ಆಡಳಿತ ಉಸ್ತುವಾರಿ ವಹಿಸಿರುತ್ತಾರೆ. ಇವರಿಗೆ ಸಲಹೆ ಸೂಚನೆಗಳನ್ನು ನೀಡಲು ಅಧಿಕಾರಿಗಳ ತಂಡವು ಇರುತ್ತದೆ ಕೇಂದ್ರ ಸರ್ಕಾರದ ಪ್ರಸ್ತಾವದೊಂದಿಗೆ ಲಡಾಕ್ ಕೂಡ ಈಗ ಕೇಂದ್ರಾಡಳಿತ ಪ್ರದೇಶವಾಗಿದೆ.

**ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದತಿಯ ಕುರಿತ ಸುಪ್ರೀಂ ಕೋರ್ಟಿನ ತೀರ್ಪು**

ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿನಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಈ ಅರ್ಜಿಗಳನ್ನು ಪರಿಶೀಲಿಸಿದ ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಡಿ ವೈ ಚಂದ್ರಚೂಡ್, ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಸೂರ್ಯಕಾಂತ್, ಕಿಶನ್ ಕೌಲ್ ಮತ್ತು ಸಂಜೀವ್ ಕನ್ನ ಎಂಬ ಐವರನ್ನು ಒಳಗೊಂಡ ಸಂವಿಧಾನಿಕ ಪೀಠವು ತೀರ್ಪು ನೀಡಿದವು. ಆ ತೀರ್ಪಿನ ಸಂಕ್ಷಿಪ್ತ ರೂಪವನ್ನು ಇಲ್ಲಿ ನೀಡಲಾಗಿದೆ.

ನ್ಯಾಯಮೂರ್ತಿಗಳಾದ ಬಿ.ಆರ್ ಗವಾಯಿ ಮತ್ತು ಸೂರ್ಯಕಾಂತ ಅವರ ಪರವಾಗಿ ತೀರ್ಪು ಬರೆದಿರುವ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್, 370ನೆಯ ವಿಧಿಯ ಅಡಿಯಲ್ಲಿನ ವಿಶೇಷ ಸ್ಥಾನಮಾನವೂ ಶಾಶ್ವತವಾಗಿ ಇರುವಂತದ್ದಾಗಿರಲಿಲ್ಲ ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ರಚನಾ ಸಭೆಯ ಅನುಪಸ್ಥಿತಿಯಲ್ಲಿ ವಿಶೇಷ ಸ್ಥಾನಮಾನವನ್ನು ಹಿಂಪಡೆಯುವ ಅಧಿಕಾರ ದೇಶದ ರಾಷ್ಟ್ರಪತಿಗೆ ಇದೆ ಎಂದಿದ್ದಾರೆ.

370ನೇ ವಿಧಿ ಹಾಗೂ ಒಂದನೇ ವಿಧಿಯನ್ನು ಒಟ್ಟಾಗಿ ಓದಿದಾಗ ಜಮ್ಮು ಮತ್ತು ಕಾಶ್ಮೀರವನ್ನು ದೇಶದ ಒಂದು ಭಾಗವನ್ನಾಗಿ ವಿಲೀನಗೊಳಿಸಿದ್ದು ಪರಿಪೂರ್ಣವಾಗಿತ್ತು ಎಂಬುವುದರಲ್ಲಿ ಯಾವ ಅನುಮಾನವೂ ಉಳಿಯುವುದಿಲ್ಲ. ಜಮ್ಮು ಮತ್ತು ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸಿದ್ದು ತಾತ್ಕಾಲಿಕವಾಗಿತ್ತು ಎಂಬುವುದನ್ನು 370ನೆಯ ವಿಧಿಯ ಯಾವ ವ್ಯಾಖ್ಯಾನವು ಹೇಳುವುದಿಲ್ಲ ಎಂದು ಸಿಜೆಐ ಅಭಿಪ್ರಾಯ ಪಟ್ಟರು.

ನ್ಯಾಯಮೂರ್ತಿಗಳಾದ ಕಿಶನ್‌ಕೌಲ್ ಮತ್ತು ಸಂಜೀವ್ ಕನ್ನ ಅವರು ಸಹಮತದ ಪ್ರತ್ಯೇಕ ತೀರ್ಪುಗಳನ್ನು ಬರೆದಿದ್ದಾರೆ. ಜಮ್ಮು ಮತ್ತು ಕಾಶ್ಮೀರ ರಾಜ್ಯದಿಂದ ಲಡಾಖನ್ನು ಪ್ರತ್ಯೇಕಿಸಿ ಅದನ್ನು ಕೇಂದ್ರಾಡಳಿತ ಪ್ರದೇಶವಾಗಿಸಿದ ಕೇಂದ್ರ ಸರ್ಕಾರದ ತೀರ್ಮಾನವನ್ನು ಕೋರ್ಟ್ ಎತ್ತಿ ಹಿಡಿದಿದೆ. ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆಗೆ 2024ರ ಸೆಪ್ಟೆಂಬರ್ 30ಕ್ಕೆ ಮೊದಲು ಚುನಾವಣೆ ನಡೆಸಬೇಕು ಎಂದು ಕೇಂದ್ರ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದೆ.

370ನೆಯ ವಿಧಿಯ ಕಾರಣದಿಂದಾಗಿ ಜಮ್ಮು ಮತ್ತು ಕಾಶ್ಮೀರಕ್ಕೆ ಸಾರ್ವಭೌಮ ಸ್ಥಾನ ಇತ್ತು ಎಂಬುದನ್ನು ಒಪ್ಪುವುದಾದರೆ ಒಕ್ಕೂಟದ ಜೊತೆ ವಿಶೇಷ ಒಪ್ಪಂದ ಹೊಂದಿರುವ ಇತರ ರಾಜ್ಯಗಳಿಗೂ ಇಂಥದ್ದೇ ಸಾರ್ವಭೌಮ ಇರುತ್ತದೆ ಎಂಬ ವಾದ ಎದುರಾಗುತ್ತದೆ. ಆದರೆ ವಾಸ್ತವ ಹೀಗಿಲ್ಲ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸಂದರ್ಭ ವಿಶೇಷ ಕಾನೂನಿನ ಅಂದರೆ 370ನೆಯ ವಿಧಿಯ ಅಗತ್ಯವನ್ನು ಸೃಷ್ಟಿಸಿತ್ತು 370ನೇ ವಿಧಿಯು ಅಸಮ ಒಕ್ಕೂಟ ವ್ಯವಸ್ಥೆಯ ಒಂದು ನಿದರ್ಶನ. ಇತರ ಪ್ರಜೆಗಳಿಗೆ ಇರುವುದಕ್ಕಿಂತ ಭಿನ್ನವಾದ ಸಾರ್ವಭೌಮ ಸ್ಥಾನಮಾನವು ಜಮ್ಮು ಮತ್ತು ಕಾಶ್ಮೀರದ ಜನರಿಗೆ ಇಲ್ಲ ಎಂದು ಸಂವಿಧಾನ ಪೀಠವು ಸ್ಪಷ್ಟಪಡಿಸಿದೆ.

**ತೀರ್ಪಿನ ಪ್ರಮುಖ ಅಂಶಗಳು ಈ ರೀತಿ ಇವೆ**

ದೇಶದ ಸಂವಿಧಾನವು ಜಮ್ಮು ಮತ್ತು ಕಾಶ್ಮೀರಕ್ಕೆ ಪರಿಪೂರ್ಣವಾಗಿ ಅನ್ವಯವಾಗುತ್ತದೆ ಎಂದು ಹೇಳುವ ಸಂವಿಧಾನಿಕ ಆದೇಶ 272 ಸಿಂಧುವಾಗಿದೆಯೇ ಎಂಬ ಪ್ರಶ್ನೆಯನ್ನು ಸಂವಿಧಾನ ಪೀಠವು ಪರಿಶೀಲನೆಗೆ ಒಳಪಡಿಸಿದೆ. ದೇಶದ ಸಂವಿಧಾನವು ಜಮ್ಮು ಮತ್ತು ಕಾಶ್ಮೀರಕ್ಕೆ ಪರಿಪೂರ್ಣವಾಗಿ ಅನ್ವಯವಾಗುತ್ತದೆ ಎಂಬ ಆದೇಶ ಹೊರಡಿಸಲು ರಾಷ್ಟ್ರಪತಿಯವರಿಗೆ ರಾಜ್ಯ ಸರಕಾರದ ಸಹಮತ ಪಡೆಯುವ ಅಗತ್ಯ ಇಲ್ಲ ರಾಷ್ಟ್ರಪತಿಯವರು ಇಂತಹ ಆದೇಶ ಸಿ ಓ 272 ಹೊರಡಿಸಿದ್ದು ಯಾವುದೇ ಕೆಟ್ಟ ಉದ್ದೇಶದಿಂದ ಅಲ್ಲ ಹೀಗಾಗಿ ದೇಶದ ಸಂವಿಧಾನವು ಜಮ್ಮು ಮತ್ತು ಕಾಶ್ಮೀರಕ್ಕೆ ಪರಿಪೂರ್ಣವಾಗಿ ಅನ್ವಯವಾಗುತ್ತದೆ ಎಂದು ಹೇಳುವಷ್ಟರ ಮಟ್ಟಿಗೆ ಅವರ ಆದೇಶವು ಸಿಂಧುವಾಗಿದೆ ಎಂದು ಕೋರ್ಟ್ ಹೇಳಿದೆ.

ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿ ರಾಷ್ಟ್ರಪತಿ ಹೊರಡಿಸಿದ ಆದೇಶವು ಸಿ ಓ 273 ಸಿಂಧುವಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರ ನೀಡಿರುವ ಪೀಠವು ರಾಷ್ಟ್ರಪತಿ ಹೊರಡಿಸಿದ ಈ ಆದೇಶವು ಜಮ್ಮು ಮತ್ತು ಕಾಶ್ಮೀರವನ್ನು ದೇಶದಲ್ಲಿ ವಿಲೀನಗೊಳಿಸುವ ಪ್ರಕ್ರಿಯೆಯ ಅಂತಿಮ ಹಂತದ ರೂಪದಲ್ಲಿದೆ ಹೀಗಾಗಿ ಈ ಆದೇಶವು ಸಿಂಧುವಾಗುತ್ತದೆ ಎಂದು ಸಾರಿದೆ.

ಹಿಂದಿನ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂವಿಧಾನ ರಚನಾ ಸಭೆಯ ಸಹಮತ ಇಲ್ಲದೆ 370ನೆಯ ವಿಧಿಗೆ ತಿದ್ದುಪಡಿ ತರಲು ಅವಕಾಶ ಇಲ್ಲ ಎಂದು ಕೇಂದ್ರದ ಕ್ರಮವನ್ನು ಪ್ರಶ್ನಿಸಿದ ಅರ್ಜಿದಾರರು ವಾದಿಸಿದರು ಸಂವಿಧಾನ ರಚನಾ ಸಭೆಯು ಅಂತ್ಯ ಕಂಡಿದೆ ಸಂವಿಧಾನ ರಚನಾ ಸಭೆಯೇ ಇಲ್ಲದಿದ್ದ ಸಂದರ್ಭದಲ್ಲಿ 370ನೆಯ ವಿಧಿಯು ಶಾಶ್ವತವಾಗುತ್ತದೆ ಎಂದು ಅವರು ವಾದಿಸಿದ್ದರು.

ಇದಕ್ಕೆ ಸಂಬಂಧಿಸಿ ಹೊರಡಿಸಿರುವ ತೀರ್ಪಿನಲ್ಲಿ ಸಂವಿಧಾನದ 370ನೆಯ ವಿಧಿ ಅಡಿಯಲ್ಲಿ ವಿಶೇಷ ಸ್ಥಾನಮಾನವನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ಐತಿಹಾಸಿಕ ಸಂದರ್ಭವನ್ನು ಪರಿಗಣಿಸಿದರೆ ಅದು ತಾತ್ಕಾಲಿಕ ಅವಧಿಗೆ ಮಾತ್ರವೇ ಆಗಿತ್ತು ಎಂಬ ನಿರ್ಣಯಕ್ಕೆ ನಾವು ಬಂದಿದ್ದೇವೆ ಎಂದು ಸಿಜೆಐ ಬರೆದ ತೀರ್ಪಿನಲ್ಲಿ ಹೇಳಲಾಗಿದೆ.

370ನೇ ವಿಧಿಯನ್ನು ಯಥಾವತ್ತಾಗಿ ಓದಿದಾಗ ಕೂಡ ಇದು ತಾತ್ಕಾಲಿಕ ಉದ್ದೇಶಕ್ಕಾಗಿ ಜಾರಿಯಾಗಿತ್ತು ಎಂಬುದು ಗೊತ್ತಾಗುತ್ತದೆ ಈ ವಿಧಿಯನ್ನು ಸಂವಿಧಾನದಲ್ಲಿನ ತಾತ್ಕಾಲಿಕ ಹಾಗೂ ಪರಿವರ್ತನೆಯ ಅವಧಿಯ ಕೆಲವು ಉದ್ದೇಶಗಳಿಗೆ ಸಂಬಂಧಿಸಿದ ಭಾಗದಲ್ಲಿ ಸೇರಿಸಲಾಗಿದೆ 370ನೆಯ ವಿಧಿ ಬದಿಯಲ್ಲಿ ನೀಡಿರುವ ಟಿಪ್ಪಣಿ ಕೂಡ ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದ ತಾತ್ಕಾಲಿಕ ಉದ್ದೇಶ ಎಂದು ಪೀಠ ವಿವರಿಸಿದೆ.

ಪ್ರತ್ಯೇಕವಾದ ತೀರ್ಪು ಬರೆದಿರುವ ನ್ಯಾಯಮೂರ್ತಿ ಸಂಜೆ ಕಿಶನ್ ಕೌಲ್ ಅವರು ಈ ವಿಚಾರವಾಗಿ 370ನೆಯ ವಿಧಿಯ ಉದ್ದೇಶವು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ನಿಧಾನವಾಗಿ

ಇತರ ರಾಜ್ಯಗಳಿಗೆ ಸರಿ ಸಮಾನವಾಗಿಸುವುದು ಎಂದು ಹೇಳಿದ್ದಾರೆ.

**ಜಮ್ಮು ಮತ್ತು ಕಾಶ್ಮೀರ ವಿಶೇಷ ಸ್ಥಾನಮಾನ ರದ್ದತಿ ಪರಿಣಾಮಗಳೇನು?**

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ವಿಧಿ ರದ್ದತಿಯ ಪರಿಣಾಮಗಳೇನು ಎಂಬ ಬಗ್ಗೆ ವಿವರಣೆ ನೀಡುವುದಾದರೆ ಈವರೆಗೆ ಜಮ್ಮು ಕಾಶ್ಮೀರದ ರಕ್ಷಣೆ, ವಿದೇಶಾಂಗ ವ್ಯವಹಾರ, ಸಂಪರ್ಕ ಕ್ಷೇತ್ರಗಳ ಬಗ್ಗೆ ಮಾತ್ರ ನಿರ್ಧಾರ ಕೈಗೊಳ್ಳುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇತ್ತು. ಇನ್ನು ಮುಂದೆ ದೇಶದ ಎಲ್ಲಾ ರಾಜ್ಯಗಳಂತೆ ಜಮ್ಮು ಮತ್ತು ಕಾಶ್ಮೀರಕ್ಕೂ ಕೇಂದ್ರದ ಎಲ್ಲಾ ನಿಯಮ ಕಾನೂನುಗಳು ಅನ್ವಯವಾಗಲಿದೆ. ಸಂವಿಧಾನದ 370ನೇ ವಿಧಿಯ ಜೊತೆಗೆ 35ಎ ಕಲಂ ಸಹ ರದ್ದಾಗಲಿದೆ ಇದರಿಂದ ಜಮ್ಮು ಮತ್ತು ಕಾಶ್ಮೀರದವರಿಗೆ ಪ್ರತ್ಯೇಕ ನಾಗರಿಕತೆ ಇಲ್ಲವಾಗಲಿದೆ ಪ್ರತ್ಯೇಕ ಧ್ವಜವು ಇಲ್ಲವಾಗಲಿದೆ. ಕೇಂದ್ರಾಡಳಿತ ಪ್ರದೇಶವಾಗಿ ಘೋಷಣೆ ಮಾಡಿರುವುದರಿಂದ ಜಮ್ಮು ಮತ್ತು ಕಾಶ್ಮೀರದ ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ಕೇಂದ್ರ ಸರ್ಕಾರದ ಹಿಡಿತದಲ್ಲಿರಲಿದೆ ಕೇಂದ್ರಾಡಳಿತ ಪ್ರದೇಶವಾದರೂ ಜಮ್ಮು ಮತ್ತು ಕಾಶ್ಮೀರದಲ್ಲಿ ದೆಹಲಿಯಂತೆ ಪ್ರತ್ಯೇಕ ಶಾಸಕಾಂಗ ವಿಧಾನಸಭೆ ಮತ್ತು ಸರಕಾರ ಇರಲಿದೆ. ಲಡಾಕ್ ಕೂಡ ಕೇಂದ್ರಾಡಳಿತ ಪ್ರದೇಶವಾಗಲಿದೆ. ಆದರೆ ಇಲ್ಲಿ ಪ್ರತ್ಯೇಕ ಶಾಸಕಾಂಗ ಇರದೆ ನೇರ ಕೇಂದ್ರದ ಅಧೀನದಲ್ಲೇ ಇರಲಿದೆ. ಜಮ್ಮು ಮತ್ತು ಕಾಶ್ಮೀರದ ಯುವತಿಯರು ಇತರ ರಾಜ್ಯದವರನ್ನು ಮದುವೆಯಾದರೂ ಯಾವುದೇ ಹಕ್ಕುಗಳನ್ನು ಕಳೆದುಕೊಳ್ಳುವುದಿಲ್ಲ ಈವರೆಗೆ ಅವರು ರಾಜ್ಯದ ಹೊರಗಿನವರನ್ನು ವಿವಾಹವಾದರೆ ವಿಶೇಷ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದರು. ಜಮ್ಮು ಮತ್ತು ಕಾಶ್ಮೀರದಲ್ಲಿ ನೆಲೆಸುವ ಬೇರೆ ರಾಜ್ಯದವರಿಗೂ ಅಲ್ಲಿ ಮತದಾನ ಹಕ್ಕಿಗೆ ಅವಕಾಶ ದೊರೆಯಲಿದೆ ಜಮ್ಮು ಮತ್ತು ಕಾಶ್ಮೀರದಲ್ಲಿ ಹೂಡಿಕೆ ಮಾಡಲು ಉದ್ಯಮ ಸ್ಥಾಪಿಸಲು ಬೇರೆ ರಾಜ್ಯದವರಿಗೂ ಅವಕಾಶ ದೊರೆಯಲ್ಲಿದೆ.

360 ನೇ ವಿಧಿಯ ಅಡಿಯಲ್ಲಿ ಯಾವುದೇ ರಾಜ್ಯದ ಮೇಲೆ ಆರ್ಥಿಕ ತುರ್ತು ಪರಿಸ್ಥಿತಿ ಹೇರುವ ಅಧಿಕಾರ ಕೇಂದ್ರಕ್ಕೆ ಇದೆ ಆದರೆ ಜಮ್ಮು ಮತ್ತು ಕಾಶ್ಮೀರದ ವಿಚಾರದಲ್ಲಿ ಯುದ್ಧ ಅಥವಾ ಬಾಹ್ಯ ಅಕ್ರಮದ ಸಂದರ್ಭದಲ್ಲಿ ಮಾತ್ರ ತುರ್ತು ಸ್ಥಿತಿ ಇತ್ತು ಇನ್ನು ಮುಂದೆ 360 ನೇ ವಿಧಿಯು ಈ ರಾಜ್ಯಕ್ಕೆ ಅನ್ವಯವಾಗಲಿದೆ.

ಅದೇ ರೀತಿ ಮಾಹಿತಿ ಹಕ್ಕು ಕಾಯ್ದೆ ಅನ್ವಯ ಆಗುತ್ತಿರಲಿಲ್ಲ ಮುಂದೆ ಈ ರಾಜ್ಯವು ಆರ್‌ಟಿಐ ಅಡಿ ಬರಲಿದೆ. ವಿಧಾನಸಭೆಯ ಅವಧಿ ಆರು ವರ್ಷ ಇತ್ತು ಇನ್ನು ಮುಂದೆ ಇತರ ರಾಜ್ಯಗಳಂತೆ ಐದು ವರ್ಷ ಆಗಿರುತ್ತವೆ.

**ಕೊನೆಯದಾಗಿ**

ಭಾರತವು ಪ್ರಜಾಪ್ರಭುತ್ವದ ಮೌಲ್ಯವನ್ನು ಎದೆಗಪ್ಪಿಕೊಂಡ ದೇಶ ಎಂಬ ಕಾರಣಕ್ಕಾಗಿಯಾದರೂ ಕಾಶ್ಮೀರದವರಿಗೆ ತಾವು ಭಾರತೀಯರು ಎನ್ನಲು ಹೆಮ್ಮೆ ಎನಿಸಬೇಕು. ಅದಕ್ಕೆ ಪೂರಕವಾದ ವಾತವರಣವನ್ನು ಸೃಷ್ಟಿಸುವ ಅವಶ್ಯಕತೆ ಇದೆ. ಜಮ್ಮು-ಕಾಶ್ಮೀರದ ವಿಚಾರದಲ್ಲಿ ಹಿಂದಿನ ಸರ್ಕಾರಗಳು ಚಾರಿತ್ರಿಕ ಪ್ರಮಾದ ಎಸಗಿವೆ ಎಂಬುವುದೇ ಪ್ರಸ್ಥುತ ಸರ್ಕಾರದ ವಾದವಾದರೆ ಅದನ್ನು ಸರಿಪಡಿಸುವ ದಿಸೆಯಲ್ಲಿ ಈಗಿನ ಕೇಂದ್ರ ಸರ್ಕಾರ ಕೆಲಸ ಮಾಡಬೇಕಾಗುತ್ತವೆ. ಒಂದು ಪ್ರಮಾದವನ್ನು ಸರಿಪಡಿಸುವುದಕ್ಕಾಗಿ ಇನ್ನೊಂದು ಪ್ರಮಾದ ಎಸಗುವುದು ಪರಿಹಾರ ಆಗಲಾರದು. ಭೌಗೋಳಿಕವಾಗಿ ಅತೀ ಸೂಕ್ಷ್ಮ ಪ್ರದೇಶದಲ್ಲಿ ಇರುವ ಸ್ಥಳ ಜಮ್ಮು ಮತ್ತು ಕಾಶ್ಮೀರ.ಪಾಕಿಸ್ತಾನ ಮತ್ತು ಚೈನಾ ಜೊತೆ ಗಡಿ ಪ್ರದೇಶವನ್ನು ಹಂಚಿಕೊಂಡಿರುವ ಪ್ರದೇಶ. ಈಗಾಗಲೇ ಪಾಕಿಸ್ತಾನವು ಒಂದು ಭಾಗವನ್ನು ಅಕ್ರಮಿಸಿಕೊಂಡಿವೆ ವಿಶ್ವಸಂಸ್ಥೆಯು ಕೂಡ ಪ್ರಾರಂಭದಲ್ಲಿ ಅಲ್ಲಿ ಜನಮತಗಣನೆ ನಡೆಸಲು

ಪ್ರಸ್ತಾಪಿಸಿದ್ದವು ನಂತರ ವಿಶೇಷ ಸ್ಥಾನಮಾನ ನೀಡಿಕೆಯು ಅದರ ಪ್ರಾಮುಖ್ಯತೆಯನ್ನು ಕಡಿಮೆಗೊಳಿಸಿದವು.ಮುಂದಿನ ದಿನಗಳಲ್ಲಿ ಜಮ್ಮು ಕಾಶ್ಮೀರದಲ್ಲಿ ಶಾಂತಿ ನೆಲಸಬೇಕಾದ ನಿಟ್ಟಿನಲ್ಲಿ ಸರ್ಕಾರ ಕೆಲಸ ನಿರ್ವಹಿಸಬೇಕಾಗಿದೆ ಅದಕ್ಕೆ ಅಲ್ಲಿಯ ಜನರ ವಿಶ್ವಾಸಗಳಿಸುವ ಪ್ರಯತ್ನಗಳು ನಡೆಯಬೇಕು. 2024ರ ಸೆಪ್ಟೆಂಬರ್ ಮುಂಚಿತವಾಗಿ ಅಲ್ಲಿ ಚುನಾವಣೆ ನಡೆಸಲು ಸುಪ್ರಿಂ ಕೋರ್ಟ್ ತೀರ್ಪಿನಲ್ಲಿ ಹೇಳಿದೆ ಮತ್ತು ನ್ಯಾಯಮೂರ್ತಿ ಸಂಜೆ ಕಿಶನ್ ಕೌಲ್ ಅವರು ತಮ್ಮ ಪ್ರತೇಕ ತೀರ್ಪಿನಲ್ಲಿ ಈ ರೀತಿ ಅಭಿಪ್ರಾಯಪಟ್ಟಿದೆ ಜಮ್ಮು ಮತ್ತು ಕಾಶ್ಮೀರದಲ್ಲಿ 1980 ರ ನಂತರದಲ್ಲಿ ಸರಕಾರದ ಕಡೆಯಿಂದ ಹಾಗೂ ಸರಕಾರೇತರ ಇತರ ಶಕ್ತಿಗಳಿಂದ ನಡೆದಿರುವ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆಗೆ ನಿಷ್ಪಕ್ಷಪಾತದ ಸತ್ಯಸೋಧನೆ ನಡೆಯಬೇಕು ಮತ್ತು ಸಾಮರಸ್ಯ ಆಯೋಗ ರಚಿಸಬೇಕು ಎಂದಿವೆ.ಶಾಂತಿ ನೆಮ್ಮದಿಯ ಮತ್ತು ಅಭಿವೃದ್ಧಿಯ ನಾಳೆಯ ಕಾಶ್ಮೀರಕ್ಕೆ ಸರ್ಕಾರಗಳು ಹೆಚ್ಚು ಗಮನಹರಿಸಬೇಕಾಗಿದೆ.

**ಪರಾಮರ್ಶನ ಗ್ರಂಥಗಳ**


- *ಭಾರತದ ಸಂವಿಧಾನ ರಚನಾಸಭೆಯ ಚರ್ಚೆಗಳು (ನಡಾವಳಿಗಳು).* ಸಂಪುಟ–10, ಕುವೆಂಪು ಭಾಷಾ ಪ್ರಾಧಿಕಾರ.
- ಲಕ್ಷ್ಮಿಕಾಂತ್, ಎಂ. (2012). *ಇಂಡಿಯನ್ ಪಾಲಿಟಿ.* ಟಾಟ ಮೆಗ್ರೋಹಿಲ್ಸ್ ಪಬ್ಲಿಕೇಶನ್.
- Durgadasbasu. (2012). *Introduction to the constitution of India.* LexisNexis publication.
- IN RE: Article 370 Of The Constitution (n,d.) https://main.sci.gov.in/pdf/LU/article_370.pdf
- *Raj Bhavan, Government of Jammu & Kashmir*. (n.d.). https://jkrajbhawan.nic.in/constitutional-position.html
- Today in history: Maharaja Hari Singh signed instrument of accession making Kashmir part of India (2023, October 26). *The Times of India*. https://timesofindia.indiatimes.com/india/today-in-history-maharaja-hari-singh-signed-instrument-of-accession-making-kashmir-part-of-india/articleshow/104727961.cms?from=mdr
- Wikipedia contributors. (2024, January 12). *Article 370 of the Constitution of India*. Wikipedia. https://en.wikipedia.org/wiki/Article_370_of_the_Constitution_of_India